ಇಲಾಖಾ ವಾಹನದಲ್ಲಿ ಕೋಟಾತಟ್ಟು ಪಡುಕರೆಗೆ ಹೋಗಿ, ಶಬುದ್ದೀನ್ ಎಂಬುವರ ಮನೆಯ ಎದುರು ಸಾರ್ವಜನಿಕ ಸ್ಥಳದಲ್ಲಿ 2 ಕೋಮಿನವರು ಹಿಂದಿನ ದ್ವೇಷದಿಂದ ಕಲ್ಲು ಹಾಗೂ ಸೋಡಾ ಬಾಟಲಿ ಬಿಸಾಡುತ್ತಿರುವುದನ್ನು ನೋಡಿ ಪೊಲೀಸರು ಕಾರ್ಯೋನ್ಮುಖರಾಗಿ ಅವರನ್ನು ಚದುರಿಸಲು ಪ್ರಯತ್ನಿಸಿದರು. ಆದರೂ, ಪ್ರಯೋಜನವಾಗದೇ ಈ ಗುಂಪುಗಳು ಪೊಲೀಸರಿಗೂ ಸಹ ಅವಾಚ್ಯ ಶಬ್ಧಗಳಿಂದ ಬೈದು ಕಲ್ಲು ಹಾಗೂ ಸೋಡಾ ಬಾಟಲಿಯನ್ನು ಬಿಸಾಡಿದ್ದು, ಎರಡೂ ಕೋಮಿನ ಜನರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಜಮಾಯಿಸುವುದನ್ನು ಕಂಡು ಜಿಲ್ಲೆಯ ಅಧಿಕಾರಿ ಹಾಗೂ ಸಿಬ್ಬಂದಿಗಳು ಸದರಿ ಕೋಟಾತಟ್ಟು ಪಡುಕರೆಗೆ ಬಂದು ಎರಡೂ ಗುಂಪಿನವರು ಬಹಳಷ್ಟು ಜನ ಸೇರಿರುವುದರಿಂದ ಶಾಂತಿ ಭಂಗ ಹಾಗೂ ಪ್ರಾಣ ಹಾನಿ ಆಗುವ ಸಂಭವವಿರುವುದನ್ನು ಮನಗಂಡು ಹಲವು ಸಾರಿ ಮುನ್ನೆಚ್ಚರಿಕೆ ನೀಡಿದರು. ಇದರಿಂದ ಕೂಡ, ಪರಿಸ್ಥಿತಿಯು ಹತೋಟಿಗೆ ಬಾರದ ಕಾರಣ ಅಶ್ರುವಾಯು ಪ್ರಯೋಗ ಮಾಡಿದರು. ಆದಾಗ್ಯೂ ಜನರು ಚುದುರದೇ ಇದ್ದುರದಿಂದ ಲಘು ಲಾಠಿ ಪ್ರಹಾರ ಮಾಡಿ ಜನರನ್ನು ಚದುರಿಸಲಾಯಿತು. ಸದರಿ ಘಟನೆಗೆ ಸಂಬಂಧಿಸಿದಂತೆ ಕೋಟಾ ಪೊಲೀಸ್ ಠಾಣೆಯಲ್ಲಿ 12 ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಸ್ಥಳೀಯರಿಗಿಂತ ಹೊರಗಡೆಯಿಂದ ಬಂದು ಜಾಸ್ತಿ ಗಲಾಟೆ ಮಾಡುತ್ತಾರೆ; ಅಂತಹವನ್ನು ಗುರುತಿಸಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಶಾಸಕರು ಹೇಳಿದಂತೆ, ಒಂದೊಂದು ಸಾರಿ ಅಮಾಯಕರು, ಇಂತಹದ್ದರಲ್ಲಿ ಸಿಲುಕಿಹಾಕಿಕೊಳ್ಳುತ್ತಾರೆ, ಅದಾಗಲಾರದಂತಹ ರೀತಿಯಲ್ಲಿ, ಶಾಂತಿ ಭಂಗ ಮಾಡಿದವರು, ಪ್ರಾಣ ಮತ್ತು ಆಸ್ತಿಯನ್ನು ಜಖಂಗೊಳಿಸುವಂತಹ, ಧ್ವಂಸಗೊಳಿಸುವಂತಹ ಕಿಡಿಗೇಡಿಗಳ ಮೇಲೆ ಮಾತ್ರ ನೀವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಇಲಾಖೆಯ ಮುಖ್ಯಸ್ಥರಿಗೆ ಸೂಚನೆಗಳನ್ನು ಕಳುಹಿಸಿಕೊಡುತ್ತೇನೆ.

(ಊ) **ವಿಷಯ** :ಪಾವಗಡ ತಾಲ್ಲೂಕಿನಲ್ಲಿ ಬಿತ್ತನೆ ಬೀಜವನ್ನು ಒದಗಿಸುವ ಬಗ್ಗೆ.

ಶ್ರೀ ತಿಮ್ಮರಾಯಪ್ಪ (ಪಾವಗಡ) : ಮಾನ್ಯ ಅಧ್ಯಕ್ಷರೆ, ನಮ್ಮ ಕೃಷಿ ಇಲಾಖೆಯಿಂದ ನಮಗೇನು ಸಹಾಯಧನವಾಗಿ ಶೇ.75 ಈಗಾಗಲೇ ಸರ್ಕಾರ ಕೊಡುತ್ತಿದೆ, ಅದರ ಬಗ್ಗೆ ಈಗ ನಮಗೆ ಬಂದಿರುವ ವರದಿಯ ಪ್ರಕಾರ ಸರ್ಕಾರ ನಮಗೆ ಕೊಟ್ಟಿರುವ ಸಬ್ಸಿಡಿ ನಾಳೆಗೆ ಕ್ಲೋಸ್ ಆಗುತ್ತಿದೆ, ನಮ್ಮ ಭಾಗದ ರೈತರಿಗೆ ಇನ್ನೂ ಸುಮಾರು 30–40 ಪರ್ಸೆಂಟ್ ರೈತರಿಗೆ ಕೃಷಿ ಬಿತ್ತನೆ ಬೀಜವನ್ನು ಕೊಡಿಸಬೇಕಾಗಿದೆ, ಅಲ್ಲಿನ ಅನೇಕ ಜನ ರೈತರು ಸಂಕಷ್ಟದಲ್ಲಿದ್ದಾರೆ. ಬಿತ್ತನೆ ಕಾಲ ಸಮೀಪಿಸಿರುವುದರಿಂದ ಅವರಿಗೆ ಬಿತ್ತನೆ ಬೀಜ ಬೇಕೆಂದು ಅಲ್ಲಿ ಗಲಾಟೆಗಳಾಗುವಂತಹ ಸನ್ನಿವೇಶವಿರುವುದರಿಂದ ಸರ್ಕಾರ ಇನ್ನೂ ಹೆಚ್ಚಿನ ರೀತಿಯಲ್ಲಿ ನಮ್ಮ ತಾಲ್ಲೂಕಿಗೆ ಬಿತ್ತನೆ ಬೀಜವನ್ನು ಸರಬರಾಜು ಮಾಡುವಂತಹ ಕೆಲಸವನ್ನು ಮಾಡಬೇಕೆಂದು ಈ ಮೂಲಕ ನಾನು ಸರ್ಕಾರದಲ್ಲಿ ಮನವಿ ಮಾಡುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪುರ್ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಎರಡು ದಿವಸಗಳ ಹಿಂದೆ, ಇದೆ ವಿಷಯವನ್ನು ಗಮನ ಸೆಳಯುವ ಸೂಚನೆಯಡಿಯಲ್ಲಿ ಸದನದಲ್ಲಿ ಪ್ರಸ್ತಾಪಿಸಲಾಗಿತ್ತು, ಅದಕ್ಕೆ ಉತ್ತರವನ್ನು ನಾನು ವಿಸ್ತಾರವಾಗಿ ಕೊಟ್ಟಿದ್ದೇನೆ. ಈ ಸ್ಕೀಂ ನಡೆಯುತ್ತಿದೆ, ಅವರೇನು ಅಲ್ಲಿ ಶೇಂಗಾ ಬೀಜವನ್ನು ಕೇಳಿದ್ದರು ಅದನ್ನು ಕೊಡುತ್ತಿದ್ದೇವೆ.

ಶ್ರೀ ಶಿವರಾಜ್ ಸಜ್ಜನರ್ (ಹಾವೇರಿ) : ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲೂ ಕೂಡ ಸಬ್ಸಿಡಿ ರೂಪದಲ್ಲಿ ಬೀಜವನ್ನು ವಿತರಣೆ ಮಾಡುವುದನ್ನು ಶನಿವಾರದಿಂದ ಬಂದ್ ಮಾಡಿದ್ದಾರೆ. ಈಗ ರೈತರು ಕೃಷಿ ಇಲಾಖೆಯ ಕಛೇರಿಗೆ ಮುತ್ತಿಗೆ ಹಾಕಿ ಪಿಬಿ ರೋಡ್ ಅನ್ನು ಬಂದ್ ಮಾಡಿದ್ದಾರೆ, ಸಾವಿರಾರು ಸಂಖ್ಯೆಯಲ್ಲಿ ಇವತ್ತು ಅಲ್ಲಿ ರೈತರು ಗದ್ದಲ ಮಾಡುತ್ತಿದ್ದಾರೆ, ಈಗಾಗಲೇ ಸರ್ಕಾರ ನಮ್ಮ ಜಿಲ್ಲೆಗೆ ನಾಲ್ಕು ಕೋಟಿ ಮೂವತ್ತಮೂರು ಲಕ್ಷ ರೂಪಾಯಿಗಳ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಿತ್ತು, ಇಲ್ಲಿಯವರೆಗೆ ಐದೂವರೆ ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಸರ್ಕಾರ ಬೀಜ ರೂಪದಲ್ಲಿ ಕೊಟ್ಟಿದೆ, ಸರ್ಕಾರಕ್ಕೆ ನಾನು ಧನ್ಯವಾದವನ್ನು ಹೇಳುತ್ತೇನೆ. ಇನ್ನು ಒಂದು ವಾರದವರೆಗೆ, ಅಲ್ಲಿ ಉತ್ತಮ ಮಳೆಯಾಗಿರುವುದರಿಂದ ಸಬ್ಸಿಡಿ ಬೀಜ ವಿತರಣೆ ಮಾಡುವುದನ್ನು ಸರ್ಕಾರ ಮುಂದುವರೆಸಿ, ರೈತರಿಗೆ ಉತ್ತಮವಾದ ಬೆಂಬಲವನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರದ ಗಮನಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕ ಮಿತ್ರರು ಹೇಳಿದ ಹಾಗೆ ಹಾವೇರಿಯಲ್ಲಿ 433 ಲಕ್ಷ, 42 ಕೋಟಿಗೆ ಸೀಮಿತ ಅಲ್ಲ, ಇದು ಸ್ವಲ್ಪ ಹೆಚ್ಚಿಗೆ ಮಾಡಿ 64 ಕೋಟಿಗೆ ತೆಗೆದುಕೊಂಡಿದ್ದೇವೆ. ಅದಕ್ಕೂ ಮೀರಿ, ಮೊನ್ನೆ 23ನೇ ತಾರೀಖಿನವರೆಗೆ 550 ಲಕ್ಷ ರೂಪಾಯಿಯವರೆಗೆ ಅಲ್ಲಿ ಸಬ್ಸಿಡಿ ಕೊಡಲಾಗಿದೆ. ಈಗ ಎಲ್ಲಿಯೂ ನಿಲ್ಲಿಸಿಲ್ಲ. ಭತ್ತ ರಾಗಿ ಇವೆಲ್ಲಾ ಕೊಡುತ್ತಿದ್ದೇವೆ. High value crops ಬೇಕಾದಂತಹ ಜನರಿಗೆ ಇಡೀ ರಾಜ್ಯದಲ್ಲಿ 72 ಲಕ್ಷ ಹೆಕ್ಟೇರ್ ಏನು ಸಣ್ಣ ಮತ್ತು ಅತಿ ಸಣ್ಣ ರೈತರಿದ್ದಾರೆ, ಆ ರೈತರಿಗೆ ಕೊಡಬೇಕೆಂದು ನಾವು ಏನು ಯೋಜನೆ ಹಾಕಿಕೊಂಡಿದ್ದೇವೆ, ಅದರಲ್ಲಿ 75 ಪರ್ಸೆಂಟ್ ನಾವು ತೆಗೆದುಕೊಂಡಿದ್ದರೆ, ಸುಮಾರು 16 ರಿಂದ 17 ಲಕ್ಷ ಹೆಕ್ಟೇರ್‌ಗೆ ನಾವು ಮೊದಲೇ ಪ್ಲ್ಯಾನ್ ಮಾಡಿಕೊಂಡಿದ್ದೇವೆ. ಹಾಗಾಗಿ ಶಾಸಕರು ಅಲ್ಲಿ ಹೋಗಿ ವಿಚಾರಣೆ ಮಾಡಿದರೆ, ಆ 75 ಪರ್ಸೆಂಟ್ ಭಾಗದಲ್ಲಿ ಬರುವಂತಹ ಎಲ್ಲಾ ರೈತರಿಗೆ ಸಬ್ಸಿಡಿ ಕೊಟ್ಟಿದ್ದೇವೆ. ರೈತರಿಗೆ ಭತ್ತ ಬೇಕಾದರೆ, ಇದು ಇನ್ನೂ ನಡೆಯುತ್ತಿದೆ, ಕೊಡುತ್ತೇವೆ.

ಶ್ರೀ ಶಿವರಾಜ್ ಸಜ್ಜನರ್ : ನಮ್ಮ ತಾಲ್ಲೂಕಿನಲ್ಲಿ ಸೋಯಾಬೀನ್ ಹಾಗೂ ಗೋವಿನ ಜೋಳದ ಬೀಜಗಳ ಬೇಡಿಕೆ ಇದೆ. ರೈತರು ಅಲ್ಲಿ ದಾಂದಲೆ ಮಾಡುತ್ತಿದ್ದಾರೆ. ಒಂದು ವಾರದವರೆಗೆ ಇದನ್ನು ಮುಂದುವರೆಸಬೇಕೆಂದು ನನ್ನ ವಿನಂತಿ.

ಶ್ರೀ ಬಂಡೆಪ್ಪ ಕಾಶಂಪೂರ್ : ಎಲ್ಲೂ ಬಂದ್ ಆಗಿಲ್ಲ. ನಡೆಯುತ್ತಿದೆ. ಅತೀ ಸಣ್ಣ ಮತ್ತು ಸಣ್ಣ ರೈತರಿಗೆ ಸಬ್ಸಿಡಿ ದರದಲ್ಲಿ ಬೀಜಗಳನ್ನು ಕೊಡುವಂತಹ ಕೆಲಸ ನಾವು ಇನ್ನೂ ಮಾಡುತ್ತಿದ್ದೇವೆ. ಮಾಡುತ್ತೇವೆ.

ಶ್ರೀ ಶಿವರಾಜ್ ಸಜ್ಜನರ್ : ಸಣ್ಣ ರೈತರದ್ದೇ ಬೇಡಿಕೆ ಇದೆ.